

ವಿಶ್ವಪ್ರಸಿದ್ಧ 'ಚಾರ್‌ಮಿನಾರ್' ಆವರಣದಲ್ಲಿ ವಿಶ್ವಸುಂದರಿ ಕಿರೀಟದ ಆಕಾಂಕ್ಷಿಗಳ ಗ್ರೂಪ್ ಫೋಟೊ

# ಸೌಂದರ್ಯ ಸಮರ

ಹೈದರಾಬಾದ್ ಮುತ್ತಿನ ನಗರಿಯೆಂದು ಪ್ರಸಿದ್ಧ. ಈ ಮುತ್ತಿನ ನಗರದಲ್ಲೀಗ ಸೌಂದರ್ಯದ ಮುತ್ತುಗಳು.

ಧಗೆಯ ದಿನಗಳಲ್ಲಿ, ದೇಶ ವಿದೇಶಗಳ ಚೆಲುವೆಯರು ಹೈದರಾಬಾದ್‌ನಲ್ಲಿ ತಂಗಾಳಿಯಂತೆ ಸುಳಿಯುತ್ತಿದ್ದಾರೆ. 2025ರ 'ವಿಶ್ವಸುಂದರಿ' (ಮಿಸ್ ವರ್ಲ್ಡ್) ಸೌಂದರ್ಯ ಸ್ಪರ್ಧೆಯ ಆತಿಥ್ಯದಿಂದಾಗಿ ಹೈದರಾಬಾದ್ ಈಗ ಸುದ್ದಿಯಲ್ಲಿದೆ.

ಭಾರತದ ಪಾಲಿಗೆ ಈ ಬಾರಿಯ ವಿಶ್ವಸುಂದರಿ ಸ್ಪರ್ಧೆ ಮಹತ್ವದ್ದು. 2024ರಲ್ಲಿ ನಡೆದ ಸುಂದರಿಯರ ಸ್ಪರ್ಧೆಯ ಆತಿಥ್ಯವನ್ನೂ ಭಾರತವೇ ವಹಿಸಿಕೊಂಡಿತ್ತು. ದೇಶದ ಆರ್ಥಿಕ ರಾಜಧಾನಿ ಖ್ಯಾತಿಯ ಮುಂಬಯಿಯಲ್ಲಿ ನಡೆದ ಆ ಸ್ಪರ್ಧೆಯಲ್ಲಿ ಸೌಂದರ್ಯದ ಕಿರೀಟ ಝೆಕ್ ರಿಪಬ್ಲಿಕ್‌ನ ಚೆಲುವೆಯ ಮುಡಿಗೇರಿತ್ತು. ಈಗ ಹೈದರಾಬಾದ್‌ನಲ್ಲಿ ಎಪ್ಪತ್ತೆರಡನೇ ವಿಶ್ವಸುಂದರಿ ಸ್ಪರ್ಧೆಯ ಪೋಟಿ ನಡೆಯುತ್ತಿದೆ. ಹೀಗೆ ಸತತವಾಗಿ ಎರಡು ಬಾರಿ 'ವಿಶ್ವಸುಂದರಿ' ಸ್ಪರ್ಧೆ ಒಂದೇ ದೇಶದಲ್ಲಿ ನಡೆಯುತ್ತಿರುವುದು, ಬ್ರಿಟನ್ ಅನ್ನು ಬಿಟ್ಟರೆ ಭಾರತದಲ್ಲಷ್ಟೇ. ಇದು ಭಾರತಕ್ಕೆ ದೊರೆತಿರುವ ವಿಶೇಷ ಅವಕಾಶ.

ಮುಂಬಯಿಗೂ ಮೊದಲು 'ವಿಶ್ವಸುಂದರಿ' ಸ್ಪರ್ಧೆ ಭಾರತದಲ್ಲಿ ಮೊದಲ ಬಾರಿ ನಡೆದುದು 1996ರಲ್ಲಿ. ಆಗ ಸ್ಪರ್ಧೆಯ ಆತಿಥ್ಯ ವಹಿಸಿದ್ದುದು ಬೆಂಗಳೂರು. ಅಮಿತಾಭ್ ಬಚ್ಚನ್‌ರ 'ಎಬಿಸಿಎಲ್' ಸಂಘಟಿಸಿದ್ದ ಆ ಸ್ಪರ್ಧೆ ವಿವಾದದ ನಡುವೆಯೇ ಪೂರ್ಣಗೊಂಡಿತ್ತು.

ರಾಜ್ಯ ಕ್ಷಾಮದ ದವಡೆಗೆ ಸಿಲುಕಿರುವ ಸಂದರ್ಭದಲ್ಲಿ ಸೌಂದರ್ಯದ ವಿಜೃಂಭಣೆಯ ಸಂಭ್ರಮ ಬೇಡ ಎನ್ನುವ ಕಾರಣದಿಂದಾಗಿ, ರೈತ ಸಂಘಟನೆಗಳು ಹಾಗೂ ಕನ್ನಡಪರ

'ಸಾಂಸ್ಕೃತಿಕ ನಡಿಗೆ' ಹೆಸರಿನಲ್ಲಿ ಹೈದರಾಬಾದ್‌ನ ಆಭರಣ ಮಳಿಗೆಯೊಂದರಲ್ಲಿ ಖರೀದಿಯ ಭರಾಟೆಯಲ್ಲಿ ಸುಂದರಿಯರು

